ಇಂಜಕ್ಷನ್ ತೆಗೆದುಕೊಳ್ಳುವ ಶಕ್ತಿ ಇರುವುದಿಲ್ಲ. ಎರಡನೆಯದಾಗಿ ಸರ್ಕಾರಿ ಆಸ್ಪತ್ರೆಗೆ ಹೋದರೆ ವಿಷದ ಹಾವಿನಿಂದ ಕಡಿತವಾದರೆ ಔಷಧಿ ಇರುವುದಿಲ್ಲ. ನೀವು ಬೆಂಗಳೂರಿಗೆ ಹೋಗಿಬಿಡಿ ಎಂದು ಅಲ್ಲಿಯ ವೈದ್ಯರು ತಕ್ಷಣ ಹೇಳಿಬಿಡುತ್ತಾರೆ. ಬೆಂಗಳೂರಿಗೆ ಕಾರಿನಲ್ಲಿ ಬರುವುದರೊಳಗೆ ವ್ಯಕ್ತಿ ಸತ್ತು ಹೋಗಿ ಬಿಡುತ್ತಾನೆ. ಸೊಳ್ಳೆ, ಹುಚ್ಚುನಾಯಿ ಕಡಿದರೆ ಮನುಷ್ಯ ಬೇಗ ಸಾಯುವುದಿಲ್ಲ. ಎಲ್ಲರಿಗೂ ಗೊತ್ತಿದೆ ಏನೆಂದರೆ ಹಾವಿನ ವಿಷಭಯಂಕರವಾಗಿರುತ್ತದೆ. ನಮ್ಮ ಜಿಲ್ಲೆಯಲ್ಲಂತೂ ಪ್ರತ್ಯೇಕವಾಗಿ ಹಾವಿನ ಕಡಿತದ ಪ್ರಕರಣಗಳು ಹೆಚ್ಚಾಗಿವೆ. ಇದಕ್ಕೆ ಸರ್ಕಾರ ಹಾವನ್ನು ಹಿಡಿಯಬಾರದು ಎಂದು ಕಾಯಿದೆ ಮಾಡಿದೆ ಹೋಗಲಿ ಹಾವು ಕಡಿದಾಗ ಔಷಧಿ ಸರಬರಾಜು ಮಾಡುತ್ತಾರೆ ಎಂದರೆ ಅದೂ ಕೂಡ ಇಲ್ಲ. ಇದಕ್ಕೆ ಕೊಡುವ ಇಂಜಕ್ಷನ್‌ಗೆ ಎರಡು ನೂರು ರೂಪಾಯಿ ಆಗುತ್ತದೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಉತ್ತರ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಜಿಲ್ಲೆಯಲ್ಲಿ ಹಾವುಗಳು ಜಾಸ್ತಿ ಎಂದು ಹೇಳಿದರು. ತಾವು ಕೂಡ ಅದೇ ಜಿಲ್ಲೆಯವರು. ತಮ್ಮ ಅನುಭವ ಏನು ಎಂದು ಗೊತ್ತಾಗಲಿಲ್ಲ. ಹಾವು ಕಡಿತದ ಬಗ್ಗೆ ತಮ್ಮ ಅನುಭವ ಏನು ?

ಅಧ್ಯಕ್ಷರು : ನನಗೆ ಕಡಿಯಲಿಕ್ಕೆ ನಾನು ಊರಿಗೇ ಹೊಗಿಲ್ಲ. ನಾನು ಇಲ್ಲೇ ಇದ್ದುಬಿಟ್ಟಿದ್ದೇನಲ್ಲ !

ಶ್ರೀ ವಾಟಾಳ್ ನಾಗರಾಜ್ : ತಮಗೆ ಗೊತ್ತಿರಬೇಕಲ್ಲ ? ಹಾವಿನ ಕಾಟ ಎಷ್ಟು, ಯಾವ್ಯಾವ ತರಹದ ಹಾವುಗಳು ಇವೆ ಎಂದು ತಾವು ಹೇಳಬೇಕಾಗುತ್ತದೆ.

11.50 ಎ.ಎಂ.

ತಪ್ಪಿಸಿಕೊಂಡಿರತಕ್ಕ ಎರಡು ಹಾವುಗಳನ್ನೇ ಹಿಡಿಯುವುದಕ್ಕಾಗಲಿಲ್ಲ. ಇದನ್ನಾದರೂ ಹಿಡಿಯೋಣವೆಂದು ತಲೆಯಲ್ಲಿ ಬಂತು, ಅದನ್ನೂ ಹಿಡಿಯುವುದಕ್ಕಾಗಲಿಲ್ಲ. ಮತ್ತೆ ಇದನ್ನು ಎಲ್ಲಿ ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ.

(3) ವೈದ್ಯಕೀಯ ಹಾಗೂ ಇಂಜಿನಿಯರಿಂದ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ.

ಶ್ರೀ. ವಿಶ್ವೇಶ್ವರಯ್ಯ : ನಿನ್ನೆಯದಿನ ಪ್ರವೇಶ ಪರೀಕ್ಷೆ ಬಗ್ಗೆ ವಿಷಯ ಪ್ರಸ್ತಾಪವಾದಾಗ ಸನ್ಮಾನ್ಯ ಮುಖ್ಯಮಂತ್ರಿಗಳು, ಪ್ರವೇಶ ಪರೀಕ್ಷೆ ಬಗ್ಗೆ ಗೊಂದಲದ ಹೇಳಿಕೆ ಕೊಟ್ಟಿದ್ದಾರೆ. ಶಿಕ್ಷಣ ಸಚಿವರು, ಪ್ರವೇಶ ಪರೀಕ್ಷೆಯನ್ನು ಮಾಡಿಯೇ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಸ್ಪಷ್ಟೀಕರಣ ಬೇಕು.

ಅಧ್ಯಕ್ಷರು : ನಿನ್ನೆ ಈ ವಿಚಾರದಲ್ಲಿ ಹೇಳಿದ್ದಾರೆ. ಈಗ ಶಿಕ್ಷಣ ಸಚಿವರು ಇಲ್ಲಿಯೇ ಇದ್ದಾರೆ, ಮತ್ತೆ ಕ್ಲಾರಿಫೈ ಮಾಡುತ್ತಾರೆ, ತಾವು ಕುಳಿತುಕೊಳ್ಳಿ.

ಶ್ರೀ ಸುರೇಶ್‌ಕುಮಾರ್ : ''ಪರಿಶೀಲನೆಯಲ್ಲಿದೆ'' ಎಂದು ಹೇಳಿದ್ದಾರೆ. ಪಿ.ಯು.ಸಿ. ಪರೀಕ್ಷೆಗೂ ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆಗೂ ಸಂಬಂಧ ಇಲ್ಲ.

ವಿಧಾನ ಪರಿಷತ್ತಿನಲ್ಲಿ ಯಾವುದೇ ಸಂದೇಶ ಇಟ್ಟುಕೊಳ್ಳಬಾರದು, ನಾವು ಪ್ರವೇಶ ಪರೀಕ್ಷೆ ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಡಿ. ಮಂಜುನಾಥ್ : ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಮಾಡುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿಲ್ಲ. ಇಲ್ಲಿ ಹೇಳಿಕೆಯಾದ ಮೇಲೆ, ಮತ್ತೆ ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದ್ದೇನೆ. ಏಕೆಂದರೆ, ಈ ಪರೀಕ್ಷೆ ಮಾಡಿ, ಎಲ್ಲಾ ಆಗಬೇಕಾದರೆ ತಡವಾಗುತ್ತದೆ. ಕಳೆದ ವರ್ಷ ಏನು ಗೊಂದಲ ಆಯಿತು. ಅದು ಆಗಬಾರದೆಂದು, ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದ್ದೇನೆ. ಆಮೇಲೆ ಮುಖ್ಯಮಂತ್ರಿಗಳ ಹತ್ತಿರವೂ ಮತ್ತೆ ಮಾತನಾಡಿದ್ದೇನೆ, ಪ್ರವೇಶ ಪರೀಕ್ಷೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಸುರೇಶ್‌ಕುಮಾರ್ : ಈ ವರ್ಷ ಪ್ರವೇಶ ಪರೀಕ್ಷೆ ಮಾಡುತ್ತಿರೋ?

ಅಧ್ಯಕ್ಷರು : ಮಾಡುತ್ತಾರೆ.

ಶ್ರೀ ಎ. ರಾಮದಾಸ್ : ಮೇಲ್ಮನೆಯಲ್ಲಿ ಪ್ರವೇಶ ಪರೀಕ್ಷೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಇಲ್ಲಿ ''ಪರಿಶೀಲನೆ ಮಾಡುತ್ತೇವೆಂದು'' ಹೇಳಿದ್ದಾರೆ. ಸರ್ಕಾರದಿಂದ ಸರಿಯಾದ ಉತ್ತರ ಬಂದಿಲ್ಲ. ಈ ಗೊಂದಲದಲ್ಲಿ ವಿದ್ಯಾರ್ಥಿಗಳು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಿ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿದಾಗ, ಏನು ತೀರ್ಮಾನ ಮಾಡಬೇಕೋ, ಏನು ಪಾಲಿಸಿ ತೆಗೆದುಕೊಳ್ಳಬೇಕೋ ಎಂಬ ಬಗ್ಗೆ ಹೌಸ್‌ನಲ್ಲಿ 4 ಗಂಟೆಯಲ್ಲಿ ಉತ್ತರ ಕೊಡಬೇಕಾದರೆ, ಕೊಟ್ಟಿರಬಹುದು. ಆದರೆ, ನಾವೇನು ಹೇಳುತ್ತೇವೆ ಎಂದರೆ, ಹೋದಸಾರಿ ಪರೀಕ್ಷೆಯಾದಾಗ, ಅಂದರೆ ಪಿ.ಯು.ಸಿ. ಪರೀಕ್ಷೆ ನಡೆಯುವಂಥ ಸಂದರ್ಭದಲ್ಲಿ, ಏಪ್ರಿಲ್ ೧೫ ರಿಂದಲೇ ಸಿದ್ಧತೆ ಯಾಗುತ್ತಿತ್ತು. ನೀವು ಈ ಸಾಮಾನ್ಯ ಪ್ರವೇಶ ಪರೀಕ್ಷೆ ಮಾಡುತ್ತೀರಿ. ಆದರೆ, ಇದಕ್ಕೆ ಆಗಬೇಕಾದ ಅಪ್ಲಿಕೇಷನ್‌ಗಳು, ತರಾತುರಿಯಲ್ಲಿ ಸಿದ್ಧತೆ ಮಾಡಿಕೊಳ್ಳುವುದಕ್ಕೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ? ಈ ಸದನದ ಮೂಲಕ ಈ ರಾಜ್ಯದ ಇಂಜಿನಿಯರ್, ಮೆಡಿಕಲ್, ಡೆಂಟಲ್ ಇತ್ಯಾದಿಗಳಿಗೆ ಪ್ರವೇಶ ಪರೀಕ್ಷೆ ಕಂಡಕ್ಟ್ ಮಾಡುತ್ತೇವೆ. ಆಗಬೇಕಾದ ಸಿದ್ಧತೆ ಮಾಡುತ್ತೇವೆ ಎನ್ನುವುದನ್ನು ಸ್ಪಷ್ಟಮಾಡಿದರೆ ಮುಗಿದುಹೋಯಿತು.

ಶ್ರೀ ಡಿ. ಮಂಜುನಾಥ್ : ನಾವು ಮಾಡುತ್ತೇವೆಂದು ಹೇಳಿದ್ದೇವೆ, ಸಿದ್ಧತೆಯನ್ನೂ ಮಾಡುತ್ತೇವೆ, ಪರೀಕ್ಷೆಯನ್ನೂ ಮಾಡುತ್ತೇವೆ.

4) Admission to P.G. Course for the students who passed MBBS in 4 attempts.

Sri Quamarul Islam : Sir, the students of medical college at Gulbarga are planning to have from 22/4/1995.